ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ

*ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ*

ವಾರ್ತಾ ಸೌಧ, ಸಂಖ್ಯೆ : 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001

---

ಸಂಖ್ಯೆ: ವಾಇ : ಉನಿ : ಸುಮಪ : 2014-15 : ಜುಲೈ 26, 2014

ಪತ್ರಿಕಾ ಪ್ರಕಟಣೆ

# *ಮೀಸೆ* ರಂಗಣ್ಣ ಅವರ ನಿಧನಕ್ಕೆ ಮುಖ್ಯಮಂತ್ರಿ ಸಂತಾಪ

ಬೆಂಗಳೂರು, ಜುಲೈ 26 ( ಕರ್ನಾಟಕ ವಾರ್ತೆ) :

ರಾಜ್ಯ ಪತ್ರಿಕಾ ರಂಗದಲ್ಲಿ *ಮೀಸೆ ರಂಗಣ್ಣ* ಎಂದೇ ಜನಪ್ರಿಯತೆ ಗಳಿಸಿದ್ದ *ಸಂಯುಕ್ತ ಭಾರತ* ಹಾಗೂ *ಫೆಡರಲ್ ಇಂಡಿಯಾ* ಪತ್ರಿಕೆಗಳ ಸಂಪಾದಕರಾಗಿದ್ದ ಶ್ರೀ ಹೆಚ್. ಎಸ್. ರಂಗನಾಥ್ ಅವರ ನಿಧನಕ್ಕೆ ಮುಖ್ಯಮಂತ್ರಿ ಶ್ರೀ ಸಿದ್ಧರಾಮಯ್ಯ ಅವರು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

ಮೇನಕ ಚಲನಚಿತ್ರ ನಿಯತಕಾಲಿಕೆಯಿಂದ ಪತ್ರಿಕೋದ್ಯಮವನ್ನು ಪ್ರವೇಶಿಸಿದ್ದ ರಂಗಣ್ಣ ಅವರು ಆತ್ಮೀಯತೆಗೆ ಮತ್ತೊಂದು ಹೆಸರಾಗಿದ್ದರು. ಎಲ್ಲರೊಂದಿಗೆ ಎಲ್ಲೆಡೆ ಎಳೆ ನಗೆ ಬೀರುತ್ತಾ ಗಮನ ಸೆಳೆಯುತ್ತಿದ್ದ ರಂಗಣ್ಣ ಅವರು ತಮ್ಮ ವಿನಯತೆ ಮತ್ತು ವಿನಮ್ರತೆಯಿಂದ ಎಲ್ಲರ ಪ್ರೀತಿಗೆ ಪಾತ್ರರಾಗಿದ್ದರು. ಎಂದು ಶ್ರೀ ಸಿದ್ದರಾಮಯ್ಯ ಅವರು ಬಣ್ಣಿಸಿದ್ದಾರೆ.

ಅತ್ಯಂತ ಉತ್ಸಾಹಿಗಳೂ ಹಾಗೂ ಕ್ರಿಯಾಶೀಲರೂ ಆಗಿದ್ದ ರಂಗಣ್ಣ ಅವರ ಹಠಾತ್ ನಿಧನದಿಂದ ಆತ್ಮೀಯ ಮಿತ್ರನೋರ್ವನನ್ನು ಕಳೆದುಕೊಂಡಂತಾಗಿದೆ ಎಂದು ಮುಖ್ಯಮಂತ್ರಿ ತಮ್ಮ ಸಂದೇಶದಲ್ಲಿ ತಿಳಿಸಿದ್ದಾರೆ.

ಪುಷ್ಪ ನಮನ

ರಂಗಣ್ಣ ಅವರ ನಿಧನದ ಸುದ್ದಿ ತಿಳಿಯುತ್ತಿದಂತೆಯೇ, ನಗರದ ಜೆ ಪಿ ನಗರದಲ್ಲಿರುವ ಅವರ ಸೋದರಿಯ ಮನೆಗೆ ತೆರಳಿ ರಂಗಣ್ಣ ಅವರ ಪಾರ್ಥಿವ ಶರೀರರಕ್ಕೆ ಪುಷ್ಪ ನಮನ ಸಲ್ಲಿಸಿ ಶ್ರೀ ಸಿದ್ದರಾಮಯ್ಯ ಅವರು ಗೌರವ ಅರ್ಪಿಸಿದರು.

********

ಡಿ ಪಿ ಎಂ